Gaja Kesari Monthly Kannada Magazine:-

# ಪ್ರತಿಭಾವಂತ ಯುವ ವಿಜ್ಞಾನಿಗಳ ಹುಟ್ಟುಹಾಕಿ ಪ್ರೋತ್ಸಾಹಿಸುತ್ತಿರುವ ಶಿರಡಿ ಸಾಯಿ ಇಂಜಿನಿಯರಿಂಗ್ ಕಾಲೇಜ್

Issue no-1 June:-14 page no-4.5

ದೇಶದಲ್ಲಿರುವ ಸಂಪನ್ಮೂಲಗಳನ್ನು ವೈಜ್ಞಾನಿಕ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡರೆ ಮಾತ್ರ ದೇಶವು ಪ್ರಗತಿಯಾಗುತ್ತದೆ ಎಂದು ಗ್ಲೋಬಲ್ ಅಲೆನ್ಸ್‌ನ ನಿರ್ದೇಶಕ ಮಹೇಂದ್ರ ಕತ್ರೀಸನ್ ರವರು ತಿಳಿಸಿದರು.

ಪಟ್ಟಣದ ಶಿರಡಿ ಸಾಯಿ ಇಂಜನಿಯರ್ ಕಾಲೇಜಿನ ವಿಧ್ಯಾರ್ಥಿಗಳು ಯೋಜನೆ ಪರೀಕ್ಷೆ ಅಂಗವಾಗಿ ವಿಧ್ಯಾರ್ಥಿಗಳು ಸ್ವತಃ ತಯಾಸಿದ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಬಾಗವಹಿಸಿ ಮಾತನಾಡಿದ ಅವರು ಯುವಕ-ಯುವತಿಯರಲ್ಲಿ ತಾಂತ್ರಿಕ ಶಿಕ್ಷಣವನ್ನ ನೀಡಲು ಪ್ರತಿ ಕಾಲೇಜಿನಲ್ಲಿ ಹೆಚ್ಚಾಗಿ ತಾಂತ್ರಿಕ ತರಬೇತಿ ಶಿಬಿರಗಳನ್ನ ನಡೆಸಿದರೆ ಯುವಕ -ಯುವತಿಯರು ಗುಣ ಮಟ್ಟದ ತಾಂತ್ರಿಕ ತರಬೇತಿಗಳನ್ನು ಪಡೆದು ಹೊಸ ಸಂಶೋದನೆಗಳನ್ನ ಮಾಡಿ ಹೊಸ ಉತ್ಪನ್ನಗಳನ್ನ ನಿರ್ಮಾಣಮಾಡಿ ದೇಶವನ್ನ ಅಭಿವೃದ್ಧಿ ಪಥದತ್ತ ಸಾಗಿಸಲು ಸಹಕರಿಸಿ ಎಂದು ತಿಳಿಸಿದರು.

ಶಿರಡಿ ಸಾಯಿ ಇಂಜಿನಿಯರ್ ಕಾಲೇಜಿನ ಪ್ರಾಂಶುಪಾಲರಾದ ವೈ.ವಿಜಯಕುಮಾರ್ ಮಾತನಾಡಿ ಕೈಗಾರಿಕೆಗಳಲ್ಲಿ ಹಲವಾರು ಉದ್ಯೋಗವಿದ್ದರು ಸಹ ಯುವಕ ಯುವತಿಯರಲ್ಲಿ ತಾಂತ್ರಿಕ ಕೌಶಲ್ಯವಿಲ್ಲದೆ ದೇಶದಲ್ಲಿ ವರ್ಷಕ್ಕೆ ಸುಮಾರು 75 ಲಕ್ಷ ಯುವಕ ಯುವತಿಯರು ನಿರುದ್ಯೋಗಳಾಗಿ ಹೊರ ಉಳಿಯುತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಯುವತಿಯರು ಕೇವಲ ಎಸ್.ಎಸ್.ಎಲ್.ಸಿ, ವ್ಯಾಸಂಗ ಮುಗಿಯುತ್ತಿದ್ದಂತೆ ಪೋಷಕರು ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿಯೇ ಮದುವೆಯನ್ನ ಮಾಡುತಿದ್ದಾರೆ ಇನ್ನು ಕೆಲವು ಯುವಕ ಯುವತಿಯರಲ್ಲಿ ಜೀವನದ ಮುಂದಿನ ಧ್ಯೇಯ ಮತ್ತು ಉದ್ದೇಶಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳದೆ ಕೇವಲ ನಾಮಕ ವ್ಯವಸ್ಥೆಗೆ ಶಿಕ್ಷಣವನ್ನ ಪಡೆದು ಸುಮ್ಮನಾಗುತಿದ್ದಾರೆ ಎಂದರು.

ವಿಧ್ಯಾರ್ಥಿಗಳಲ್ಲಿ ತಾಂತ್ರಿಕ ಕೌಶಲ್ಯದ ಜ್ಞಾನವನ್ನು ನೀಡಲು ಶಿರಡಿ ಸಾಯಿ ಇಂಜಿನಿಯರ್ ಕಾಲೇಜ್ ಸಂಸ್ಥೆಯು ಅಗಲು ಇರಳು ಶ್ರಮಿಸುತಿದ್ದು ಪ್ರಜ್ಞಾವಂತ ಯುವಕ-ಯುವತಿಯರು ಸಂಸ್ಥೆಯ ಜೊತೆ ಕೈಜೋಡಿಸಬೇಕು ಎಂದು ಮನವಿಮಾಡಿದರು.

ಹೊಸ ಸಂಶೋದನೆ : ದಕ್ಷಿಣಾ ಬಾರತದಲ್ಲಿ

*ದಕ್ಷಿಣಾ ಬಾರತದಲ್ಲಿ ಮೊದಲ ಬಾರಿಗೆ ಮಾರುತಿ ಕಾರ್ ಇಂಜಿನ್ ಬಳಸಿ ಎಲಿಕ್ಯಾಪ್ಟರ್ ತಯಾರಿಕೆ ಮತ್ತು ಎಟಿಮ್, ಬ್ಯಾಂಕ್‌ಗಳ ಭದ್ರತೆ ಕುರಿತು ಹೊಸ ತಂತ್ರಗಾರಿಗೆ. ಅಂಗವಿಕಲರಿಗೆ ಯಾವುದೇ ಪೆಟ್ರೋಲ್-ಡೀಸಲ್ ಬಳಸದ ವಾಹನ, ವ್ಯವಸಾಯದಲ್ಲಿ ತಾಂತ್ರಿಕತ 'ಯನ್ನು ಬಳಸಿ ಅದಿಕ ಇಳುವರಿಯನ್ನು ಪಡೆ ಯಲು ಹೊಸ ಉಪಕರಣಗಳು ಮತ್ತು 20ಕ್ಕೂ ಹೆಚ್ಚು ಎಲೆಕ್ಟ್ರಾನಿಕ್ ಹೊಸ ಉಪಕರಣಗಳನ್ನು ಕಡಿಮೆ ಹಣದಲ್ಲಿ ಶಿರಡಿ ಸಾಯಿ ಇಂಜನಿಯರ್ ಕಾಲೇಜಿನ ವಿಧ್ಯಾರ್ಥಿಗಳು ತಯಾರಿಕೆ ಮಾಡಿದ್ದು ಬಹಳ ವಿಶಿಷ್ಟವಾಗಿತ್ತು.*

